ಕೇಕಲ್ವಾ ಇದು?' ಕೃತಕ ಉತ್ಸಾಹದಿಂದ ಮಿಸೆಸ್ ಮೇನೋನ್ ಕೇಳಿದಳು. ಮದರ್ ಏನೂ ಹೇಳಲಿಲ್ಲ. ಕಿಟಕಿಯ ಮೇಲಿನಿಂದ ಜೇನ್ನೊಣಗಳ ಝೇಂಕಾರ ಕೇಳಿಸುತ್ತಿತ್ತು. ಆ ಮರ್ಮರ ಮದರನ್ನು ಇರಿಸು ಮುರಿಸುಂಟಾಗುವಂತೆ ಮಾಡಿತು.

ಸಿಸ್ಟರ್ ಯುಫ್ರೇಸ್ಯಾರವರ ತೋರುಬೆರಳನ್ನು ಗಟ್ಟಿಯಾಗಿ ಹಿಡಿದುಕೊಂಡು ಮೋಹನ್ ದಿವಾನಾಖಾನೆಯನ್ನು ಪ್ರವೇಶಿಸಿದ. ಮಿಸೆಸ್ ಮೇನೋನ್ ಅವನ ಬಿಳಿಯ ಕಾಲುಚೀಲಗಳನ್ನು ಧರಿಸಿದ ದಪ್ಪನೆಯ ಕಾಲುಗಳನ್ನು, ಕೆಂಪು ಶೂಸುಗಳನ್ನು ಮೊದಲು ಕಂಡರು.



'ಮಗನೇ, ಈ ಅಪ್ಪನನ್ನು ಮರೆತು ಬಿಟ್ಟೆಯಾ?' ಮೇನೋನ್ ಮಗುವನ್ನು ಎತ್ತಿಕೊಳ್ಳಲು ಕೈಗಳನ್ನು ಮುಂದಕ್ಕೆ ಚಾಚಿ ಕೇಳಿದನು. ಮಗು ಗಾಬರಿಯಿಂದ ತನ್ನ ಮುಖವನ್ನು ಸಿಸ್ಟರ್ ಯುಫ್ರೇಸ್ಯಾರ ಉಂಗದ ನಿರಿಗೆಗಳಲ್ಲಿ ಮುಚ್ಚಿಕೊಂಡನು.

'ಮೋಹನ್, ನಿನಗೆ ಕೇಕ್ ತಿನ್ನ ಬೇಕಾ? ಒಳ್ಳೆಯ ಬ್ಲಾಕ್ ಫಾರೆಸ್ಟ್ ಕೇಕ್...' ಲೀಲಾ ಪ್ರಶ್ನಿಸಿದಳು.

ಮಗು ತನ್ನ ಮುಖವನ್ನು ತೋರಿಸಲಿಲ್ಲ. ಮಳೆಗಾಲವಾದುದರಿಂದ ಒಗೆದು ಒಣ ಹಾಕಿದ್ದ ಪೂರ್ಣ ಒಣಗದ ಬಟ್ಟೆಗಳ ಕಮಟು ವಾಸನೆ. ಆ ಕ್ರೈಸ್ತ ಸನ್ಯಾಸಿನಿಯ ಉಡುಪಿನಲ್ಲಿ ತಂಗಿ ನಿಂತಿತ್ತು... ಮಗುವನ್ನು ಆ ವಾಸನೆ, ಪ್ರೀತಿಯ ಗಂಧ, ಪೂರ್ಣವಾಗಿ ಆವರಿಸಿಕೊಂಡು ಬಿಟ್ಟಿತ್ತು. ಸಿಸ್ಟರ್ ಯುಫ್ರೇಸ್ಯಾರ ತೆಳ್ಳಗಿನ ಮುಂದಕ್ಕೆ ತಳ್ಳಿದ ಕಾಲು ಮಂಡಿಗಳಿಗೆ ಅವನು ತನ್ನ ಮುಖವನ್ನು ಉಜ್ಜಿದ. ಸೋಫಾದಿಂದ ಎದ್ದು ನಿಂತು ತನ್ನ ಪಕ್ಕಕ್ಕೆ ಬರುತ್ತಿರುವ ವ್ಯಕ್ತಿಯನ್ನು ಮತ್ತು ಆ ಬಿಳಿಯ ಮಹಿಳೆಯನ್ನು ಅವನಿಗೆ ಎರಡನೆಯ ಸಲ ನೋಡಬೇಕೆನಿಸಲಿಲ್ಲ.

'ಮಗನೇ, ನಿನ್ನಪ್ಪನಿಗೆ ನಿನ್ನ ಮುಖ ನೋಡಬೇಕಪ್ಪ...' ಮೇನೋನ್ ಹೇಳಿದ.

'ನಿನ್ನ ಮುಖವನ್ನು ತೋರಿಸು ಮೋಹನ' ಮದರ್ ಸುಪೀರಿಯರ್ ಆಜ್ಞಾಪಿಸಿದರು.

ಮಗು ತನ್ನ ಮುಖವನ್ನು ತೋರಿಸಿದ. ಆದರೆ, ಅವನು ತನ್ನ ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿಕೊಂಡಿದ್ದ.

'ನಾನು ನಿನಗಾಗಿ ಏನೇನು ತಗೊಂಡು ಬಂದಿದ್ದೀನಿ ಅಂತ ನೋಡೋದು ಬೇಡ್ವಾ? ಕಣ್ಣು ತೆರೆ ಮೋಹನ. ಹೊಸ ಬಟ್ಟೆಗಳು, ಹೊಸ ಆಟದ ಸಾಮಾನುಗಳು ಮತ್ತು ಹೊಸತೊಂದು ಅಮ್ಮ...' ಮೇನೋನ್ ಹೇಳಿದ.

'ನಾನು ಕಾರಿನಿಂದ ಎಲ್ಲವನ್ನು ತೆಗೆದುಕೊಂಡು ಬರ್ತೀನಿ' ಲೀಲಾ ಹೇಳಿದಳು.

'ಮಗು ಕಣ್ಣು ತೆರೆದು ನನ್ನನ್ನು ನೋಡಲ್ವಾ?' ಮೇನೋನ್ ಯಾರನ್ನೋ ಎಂಬಂತೆ ಕೇಳಿದ.

'ಅವನಿಗೆ ಜ್ವರವಿತ್ತು. ಇವತ್ತು ಸ್ನಾನ ಮಾಡಿಸಿದ್ದಷ್ಟೆ.'

ಮೋಹನನ ನಡವಳಿಕೆಯನ್ನು ಸಮರ್ಥಿಸುವಂತೆ ಸಿಸ್ಟರ್ ಯುಫ್ರೇಸ್ಯಾ ಹೇಳಿದರು. ಅವರು ಮಗುವನ್ನು ಮೇಲೆತ್ತಿ ಮದರ್ ಸುಪೀರಿಯರ್‌ರವರ ವಿಶಾಲವಾದ ಮಡಿಲಲ್ಲಿಟ್ಟರು. ಮದರ್‌ನ ದಪ್ಪನೆಯ ಎದೆಯಲ್ಲಿ ಮುಖ ಮರೆಮಾಡಿ ಮಗು ನಿಶ್ಚಲವಾಗಿ ಕುಳಿತಿತು. ಮದರಿನ ಒಳಗೆ ಟಿಕ್ ಟಿಕ್ ಎಂದು ನಿರಂತರವಾಗಿ ಸದ್ದು ಮಾಡುವ ಗಡಿಯಾರವಿದೆಯೆಂದು ಅವನಿಗನ್ನಿಸಿತು.

'ನಿನಗೆ ಹೊಸ ಅಮ್ಮನನ್ನು ನಾನು ಕರೆದುಕೊಂಡು ಬಂದಿದ್ದೇನೆ' ಮೇನೋನ್ ಹೇಳಿದ.

ಮಗುವಿನ ಹೆಗಲಿನ ಚಲನೆಯನ್ನು ನೋಡುತ್ತಾ ಸಿಸ್ಟರ್ ಯುಫ್ರೇಸ್ಯಾ ಹೇಳಿದರು, 'ಅವನು ಅಳುತ್ತಿದ್ದಾನೆ'

'ಅಳಲಿಕ್ಕೆ ಇಲ್ಲಿ ಏನಾಗಿದೆ?' ಮೇನೋನ್ ಕೇಳಿದ. ಮದರ್ ಮಗುವಿನ ತಲೆಕೂದಲಿನೊಳಗೆ ಬೆರಳುಗಳನ್ನು ಹಾಕಿ ಬಾಚತೊಡಗಿದರು.

'ನಿನಗೆ ಆಟದ ವಸ್ತುಗಳನ್ನು ನೋಡೋದು ಬೇಡ್ವೆ ಮೋಹನ್?' ಮಿಸೆಸ್ ಮೇನೋನ್ ಕೇಳಿದಳು.

ಅವಳು ಆಟಿಕೆಗಳನ್ನೆಲ್ಲ ನೆಲದ ಮೇಲಿಟ್ಟು ಅತಿಯಾದ ಆಸಕ್ತಿಯಿಂದ ಕೀಕೊಟ್ಟು ತಿರುಗಿಸಿ ಬೊಂಬೆಗಳಿಗೆ